ಸಂಪಾದಕೀಯ

# ಕಾರ್ಯಪ್ರವೃತ್ತಿ

ನಾವೆಲ್ಲರೂ ಕೆಲಸವನ್ನು ಮಾಡುತ್ತೇವೆ, ಮಾಡುತ್ತಲೇ ಇರುತ್ತೇವೆ. ಇಂದಿನ ದಿನಗಳಲ್ಲಂತೂ ಯಾರಿಗೂ ಬಿಡುವೇ ಇಲ್ಲ. ಎಲ್ಲಿ ನೋಡಿದರೂ, ಯಾವಾಗ ನೋಡಿದರೂ ಜನ ಓಡುತ್ತಿರುವುದನ್ನೇ ಕಾಣುತ್ತೇವೆ. ಅವಿಶ್ರಾಂತವಾದ ಧಾವಂತ ಬದುಕು ಸಾರ್ವತ್ರಿಕವಾಗಿ ಕಂಡುಬರುತ್ತಿದೆ. ಎಲ್ಲರೂ 'ಬಿಜಿ' (busy) ಆಗಿರುವುದರಿಂದ ಅದೇ ಸಹಜವಾದ ಸ್ಥಿತಿ ಎಂದೇ ತೋರುತ್ತದೆ. ತಂದೆ-ತಾಯಂದಿರು ತಮ್ಮ ತಮ್ಮ ವೃತ್ತಿಗಳಲ್ಲಿ ಮಗ್ನರು, ಮನೆಯ ಮಕ್ಕಳು ಶಾಲೆ ಕಾಲೇಜುಗಳಲ್ಲದೆ ಮನೆಪಾಠ ಹಾಗೂ ತಮ್ಮದೇ ಪ್ರಪಂಚದಲ್ಲಿ ಮಗ್ನರು. ಹೀಗೆ ನಾವು ಯಾರನ್ನೇ ಕೇಳಿದರೂ ನಮಗೆ ಸಿಗುವುದು ಒಂದೇ ಉತ್ತರ, 'ಅಯ್ಯೋ! ಸಮಯವೇ ಇಲ್ಲ!' ಈ ಧಾವಂತ ಬದುಕು ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂಬುದು ಆಲೋಚಿಸಬೇಕಾದ ವಿಷಯ.

### ಯಾವುದು ಕರ್ಮ?

ಸಂಸ್ಕೃತದ 'ಕೃ' ಧಾತುವಿಗೆ ಪ್ರತ್ಯಯಗಳು ಸೇರಿ ಕರ್ಮ, ಕ್ರಿಯೆ ಮುಂತಾದ ಶಬ್ದಗಳಾಗುತ್ತವೆ. ಆಂಗ್ಲ ಭಾಷೆಯ create ಶಬ್ದಕ್ಕೂ ಇದೇ ಮೂಲ. ಪ್ರತಿಯೊಂದು ಕ್ರಿಯೆಯ ಮೂಲಕ ನಾವು ಒಂದು ವಸ್ತುವನ್ನು ಸೃಷ್ಟಿಸುತ್ತೇವೆ—ಅದು ಜೋಡಣೆಯ ಮೂಲಕ ಇರಬಹುದು ಅಥವಾ ಮೂಲವಸ್ತುವಿನ ಬದಲಾವಣೆಯಿಂದಿರಬಹುದು. ಆದರೆ ಕ್ರಿಯೆ ಎನ್ನುವುದು ಸೃಷ್ಟಿಗೆ, ಉತ್ಪತ್ತಿಗೆ ಮಾತ್ರ ಸೀಮಿತವಲ್ಲ. ಕ್ರಿಯೆಯ ಮೂಲಕ ನಾಶವೂ ನಡೆಯುತ್ತದೆ. ಒಂದು ಮನೆಯನ್ನು ಕೆಡವಿ ನಾಶಮಾಡುವುದೂ ಕ್ರಿಯೆಯೇ. ಆ ಜಾಗದಲ್ಲಿ ಹೊಸ, ನೂತನ ಶೈಲಿಯ, ಅಂತಸ್ತಿಗೆ ತಕ್ಕಂತಹ ಮನೆಯನ್ನು ಕಟ್ಟಿಸುವುದೂ ಕ್ರಿಯೆಯೇ. ಅಥವಾ ಹಳೆಯ ಮನೆಯನ್ನೇ ಬದಲಾಯಿಸಿಕೊಂಡು ಆಧುನಿಕಗೊಳಿಸಿಕೊಳ್ಳುವುದೂ ಕ್ರಿಯೆ. ಅಂತೆಯೇ ಒಂದು ವಸ್ತುವನ್ನು ಪಡೆದುಕೊಳ್ಳುವುದೂ ಕ್ರಿಯೆ. ಉದಾಹರಣೆಗೆ ಸ್ವರ್ಗಾದಿ ಲೋಕಗಳನ್ನು ಬಯಸಿ ಪೂಜೆ, ಹೋಮಾದಿಗಳನ್ನು ಮಾಡುವುದು. ಇದನ್ನು ಆಪ್ಯ ಎಂದೂ ಕರೆಯುತ್ತಾರೆ. ಪಡೆಯಬೇಕಾದದ್ದು ಅಥವಾ ಗಂತವ್ಯ ಸ್ಥಳ ಎಂದೂ ತಿಳಿಯಬಹುದು. ಹೀಗೆ ಕ್ರಿಯೆಗಳು ನಾಲ್ಕು ಬಗೆ: ಉತ್ಪತ್ತಿ—ಹೊಸದಾಗಿ ತಯಾರಿಸುವುದು, ಸೃಷ್ಟಿಸುವುದು. ವಿಕಾರ—ಬದಲಾವಣೆ ತರುವುದು ಅಥವಾ ಹಾಳುಮಾಡಿ ವಿಕಾರಗೊಳಿಸುವುದು. ಸಂಸ್ಕಾರ—ಇರುವುದನ್ನು ಸಂಸ್ಕರಿಸಿ, ಉತ್ತಮಗೊಳಿಸುವುದು ಮತ್ತು ಪ್ರಾಪ್ತಿ ಅಥವಾ ಆಪ್ಯ—ಇಲ್ಲದ್ದನ್ನು ಪಡೆಯಲು ಶ್ರಮಿಸಿ, ಗಳಿಸಿಕೊಳ್ಳುವುದು.

ಭೌತಿಕ ಜಗತ್ತಿನಲ್ಲಿನ ವಿಧಿವಿಧಾನಗಳೇ ಅಲ್ಲದೆ ವ್ಯಕ್ತಿಯ ಅಂತರಂಗದ ವ್ಯಾಪಾರಗಳೂ ಕ್ರಿಯೆಯಾಗಿರುತ್ತವೆ. ಮಾನಸಿಕ ಕ್ರಿಯೆ ಅಂದರೆ ಆಲೋಚನೆ, ಭಾವನೆಗಳ ಮೂಲಕ ವ್ಯಕ್ತಿಗಳೊಂದಿಗೆ ಸಂಬಂಧ ಉಂಟಾಗುತ್ತದೆ, ಅಥವಾ ಮನಸ್ಸಿನಲ್ಲಿ ಒಂದು ಹೊಸ ವೃತ್ತಿ—ಆಲೋಚನೆಯ ತರಂಗ—ಸೃಷ್ಟಿಯಾಗುತ್ತದೆ. ಹೀಗೆ ತಯಾರಿಸು, ಸೃಷ್ಟಿಸು, ಮಾಡು, ಇವೆಲ್ಲ ಇದರ ರೂಢಾರ್ಥಗಳು. 'ಕರ್ಮ' ಪದಕ್ಕೆ ಮತ್ತೊಂದು ಅರ್ಥವೂ ಇದೆ. 'ಅಯ್ಯೋ! ನನ್ನ ಕರ್ಮ'—ಎಂದಾಗ ವಿಧಿ, ಅದೃಷ್ಟಗಳನ್ನು ಸೂಚಿಸುವ ಅರ್ಥದಲ್ಲಿ ಅದು ಬಳಕೆಯಾಗುತ್ತದೆ. ಪ್ರತಿಯೊಂದು ಕ್ರಿಯೆಯೂ ಒಳ್ಳೆಯದೋ ಅಥವಾ ಕೆಟ್ಟದ್ದೋ ಆದ ಪರಿಣಾಮವನ್ನು ಸೃಷ್ಟಿಸುತ್ತದೆ. ಈ ಕ್ರಿಯಾಫಲಗಳ ಒಗ್ಗೂಡಿದ ಪ್ರಭಾವವೇ ನಮ್ಮ ವಿಧಿ ಅಥವಾ ಅದೃಷ್ಟವನ್ನು ನಿಯಂತ್ರಿಸುವ ಶಕ್ತಿ. ಹೀಗೆ ಈ ಅರ್ಥದಲ್ಲೂ 'ಕರ್ಮ' ಶಬ್ದ ಬಳಕೆಯಲ್ಲಿದೆ.

> **ಆತ್ಮಕ್ಕೆ ಬೀಳುವ ಪ್ರತಿಯೊಂದು ಮಾನಸಿಕ, ಕಾಯಿಕ ಪೆಟ್ಟೂ ಕರ್ಮವೇ. ಅದು ಆತ್ಮನಿಂದ ಕಿಡಿಯನ್ನು ಹೊರಡಿಸುತ್ತಿದೆಯೋ ಎಂಬಂತೆ ಅದರ ಶಕ್ತಿಯನ್ನೂ, ಜ್ಞಾನವನ್ನೂ ವ್ಯಕ್ತಪಡಿಸುತ್ತದೆ. ಇಲ್ಲಿ ಕರ್ಮ ಶಬ್ದವನ್ನು ಅತ್ಯಂತ ವಿಶಾಲವಾದ ಅರ್ಥದಲ್ಲಿ ಪ್ರಯೋಗಿಸಿದೆ. ಈ ತೆರನಾಗಿ ನಾವು ಸರ್ವದಾ ಕರ್ಮ ಮಾಡುತ್ತಿದ್ದೇವೆ. ನಾನು ನಿಮ್ಮೊಡನೆ ಮಾತನಾಡುತ್ತಿದ್ದೇನೆ, ಅದು ಕರ್ಮ. ನೀವು ಕಿವಿಗೊಟ್ಟು ಕೇಳುತ್ತಿದ್ದೀರಿ, ಅದೂ ಕರ್ಮ. ನಾವು ಉಸಿರಾಡುತ್ತೇವೆ, ಅದೂ ಕರ್ಮವೇ ... ನಾವು ಮಾಡುವುದೆಲ್ಲವೂ, ಅದು ಮಾನಸಿಕವಾಗಿರಲಿ, ಕಾಯಿಕವಾಗಿರಲಿ ಪ್ರತಿಯೊಂದೂ ಕರ್ಮವೇ.**
>
> —ಸ್ವಾಮಿ ವಿವೇಕಾನಂದ
>
> (ಕೃತಿಶ್ರೇಣಿ, ಭಾಗ ೧, ಪುಟ, ೩೦-೩೧)

### ಯಂತ್ರದ ಕೆಲಸ ಕರ್ಮವಲ್ಲ

ಕರ್ಮ ಎಂದರೆ ಕೆಲಸವೆಂದೂ ಅರ್ಥವಿದೆ. ಆದರೆ ಎಲ್ಲ ಕೆಲಸಗಳೂ ಕರ್ಮವಾಗುವುದಿಲ್ಲ. ಉದಾಹರಣೆಗೆ ಯಂತ್ರಗಳು ನಿರಂತರವಾಗಿ ಕೆಲಸ ಮಾಡುತ್ತಿದ್ದರೂ ಅದು ಕರ್ಮವಲ್ಲ. ಯಂತ್ರದಿಂದ ಕೆಲಸ ಆಗುತ್ತಿರುವಾಗ ಯಂತ್ರದ ಚಾಲಕನಿಂದ ಕರ್ಮ ನಡೆಯುತ್ತಿದೆಯೇ ಹೊರತು ಕೇವಲ ಯಂತ್ರದಿಂದಲ್ಲ. ಯಂತ್ರಕ್ಕೆ ಕರ್ತೃತ್ವ ಭಾವವಿಲ್ಲ. ಅದು ಯಾಂತ್ರಿಕವಾಗಿ ಚಲಿಸುತ್ತಿರುತ್ತದೆ. ವ್ಯಕ್ತಿ ಕೆಲಸ ಮಾಡುವಾಗ ಕೆಲಸದೊಂದಿಗೆ ಅವನ ವ್ಯಕ್ತಿತ್ವವೂ ಸೇರಿಕೊಳ್ಳುವುದರಿಂದ ಅವನ ಮಾನಸಿಕ ಬೆಳವಣಿಗೆ, ಭಾವನೆಗಳ ಪ್ರಭಾವ ಆ ಕೆಲಸದ ಮೇಲೂ ಆಗುತ್ತದೆ. ಹತ್ತು ಜನರಿಗೆ ಒಂದೇ ರೀತಿಯ

ಸಾಮಗ್ರಿಗಳನ್ನು ಕೊಟ್ಟು, ಒಂದೇ ವಸ್ತುವನ್ನು ತಯಾರಿಸಲು ಹೇಳಿದರೂ ಕೂಡ ಅವುಗಳಲ್ಲಿ ಗಮನಿಸಬಹುದಾದ ವ್ಯತ್ಯಾಸವಿರುತ್ತದೆ. ಆದರೆ ಯಂತ್ರ ಒಂದೇ ರೀತಿಯ ವಸ್ತುಗಳನ್ನು ಹೊರತರುವುದು. Mass Production—ಒಂದೇ ರೀತಿಯ ವಸ್ತುವಿನ ರಾಶಿಗಟ್ಟಲೆ ತಯಾರಿಕೆ—ಕೇವಲ ಯಂತ್ರದಿಂದ ಸಾಧ್ಯ. ಒಂದಿನಿತೂ ವ್ಯತ್ಯಾಸವಿಲ್ಲದೆ ಒಂದೇ ರೀತಿಯ ವಸ್ತುವನ್ನು ಅದು ಪ್ರತಿದಿನವೂ ತಯಾರಿಸಬಲ್ಲುದು. ಆದ್ದರಿಂದಲೇ ಒಬ್ಬ ವ್ಯಕ್ತಿ ಮನಸ್ಸಿಟ್ಟು ಕೆಲಸ ಮಾಡದಿದ್ದರೆ 'ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದಾನೆ' ಎಂಬ ನೇತ್ಯಾರ್ಥಕ ಅಭಿಪ್ರಾಯ ವ್ಯಕ್ತಪಡಿಸುತ್ತೇವೆ. ಯಾಂತ್ರಿಕವಾಗಿ ಕೆಲಸಮಾಡುವುದೆಂದರೆ ಅರಿವಿಲ್ಲದೆ, ಮನಸ್ಸನ್ನು ಎಲ್ಲೋ ಹರಿಯಲು ಬಿಟ್ಟು, ಕೆಲಸ ಮಾಡುವುದು.

ಒಬ್ಬ ವ್ಯಕ್ತಿಗೆ ಪದಾರ್ಥಗಳನ್ನು ಕೊಟ್ಟು, ಒಂದೇ ರೀತಿಯ ವಸ್ತುವನ್ನು ತಯಾರಿಸಲು ಹೇಳಿದಾಗಲೂ ಕೂಡ ತಯಾರಾದ ಪ್ರತಿಯೊಂದು ವಸ್ತುವೂ ಸ್ವಲ್ಪವಾದರೂ ಭಿನ್ನವಾಗಿಯೇ ಇರುತ್ತದೆ. ವ್ಯಕ್ತಿಯ ಮನಸ್ಸು ಒಂದೇ ಸಮನಾಗಿಲ್ಲದಿರುವುದೇ ಇದಕ್ಕೆ ಕಾರಣ. ಕ್ರಿಯೆಯ ಮೇಲೆ ಮನಸ್ಸಿನ ಪ್ರಭಾವ ಎಷ್ಟು ಎಂದು ಇದರಿಂದ ತಿಳಿಯಬಹುದಾಗಿದೆ. ಆದ್ದರಿಂದ ಕರ್ಮ ಎಂದಾಕ್ಷಣ ಮೂರು ಅಂಶಗಳು ಅದರಲ್ಲಿ ಅಡಕವಾಗಿವೆ. ಮಾಡಬೇಕಾಗಿರುವ ಕೆಲಸ, ಮಾಡುವ ವ್ಯಕ್ತಿ ಮತ್ತು ಮಾಡುವ ವಿಧಾನ. ಒಂದು ಕ್ರಿಯೆ ಪರಿಪೂರ್ಣವಾಗಿ ಉತ್ತಮ ಮಟ್ಟದ್ದಾಗಿರಬೇಕಾದರೆ ಈ ಮೂರೂ ಅಂಶಗಳ ಬಗ್ಗೆ ಲಕ್ಷ್ಯವಿರಬೇಕು. ಇವು ಪರಸ್ಪರ ಸಂಬಂಧವಿರುವ ಅಂಶಗಳಾದ್ದರಿಂದ ಇವುಗಳನ್ನು ಪ್ರತ್ಯೇಕಿಸುವುದು ಸಾಧ್ಯವಿಲ್ಲ ಎಂಬುದನ್ನು ಗಮನದಲ್ಲಿಡಬೇಕು. ಮೊದಲಿಗೆ ಕೆಲಸ ಮಾಡುವವನನ್ನು—ಕರ್ತೃವನ್ನು— ಕುರಿತು ಭಾವಿಸುವುದು ಉತ್ತಮ. ಏಕೆಂದರೆ ಕೆಲಸ ಹಾಗೂ ಅದನ್ನು ಮಾಡುವ ವಿಧಾನ ಅವನ ಮೇಲೆಯೇ ಅವಲಂಬಿತವಾಗಿವೆ.

### ಕರ್ತೃ

ಕೆಲಸವನ್ನು ಮಾಡುವ ವ್ಯಕ್ತಿಗೆ 'ಅಹಂ' ಭಾವನೆ ಇರುತ್ತದೆ. 'ನಾನು ಈ ಕೆಲಸವನ್ನು ಮಾಡುತ್ತಿದ್ದೇನೆ'—ಈ ಭಾವನೆಯೇ ಪ್ರತಿಯೊಂದು ಕಾರ್ಯಕ್ಕೂ ಮೂಲ. ಇದನ್ನು 'ಕರ್ತೃತ್ವ' ಎಂದು ಕರೆಯುತ್ತಾರೆ. ಕರ್ತೃತ್ವವಿಲ್ಲದೆ ಕೆಲಸ ಅಪೂರ್ಣ ಎಂದೇ ಹೇಳಬೇಕು. ಅರಿವಿನೊಂದಿಗೆ ಕೆಲಸವನ್ನು ಮಾಡಬೇಕು ಎಂದು ಝೆನ್ ಗುರುಗಳು ಹೇಳುತ್ತಾರೆ. ಪ್ರತಿಯೊಂದು ಕ್ರಿಯೆಯಲ್ಲೂ 'ನಾನು'ವನ್ನು ತೊಡಗಿಸಿಕೊಂಡಾಗ, 'ನಾನು' ಎಂದರೆ ಏನು ಎಂಬುದರ ಸ್ಪಷ್ಟ ಅರಿವು ಮೂಡುತ್ತದೆ. ಸಾಮಾನ್ಯವಾಗಿ ನಾವು ಈ ರೀತಿ ಅರಿವಿನಿಂದ ಕೆಲಸಗಳನ್ನು ಮಾಡುವುದಿಲ್ಲ. ಓದುವುದು, ಮೆಟ್ಟಿಲು ಹತ್ತುವುದು, ಹೂ ನೋಡುವುದು ಇತ್ಯಾದಿ ಚಟುವಟಿಕೆಗಳೆಲ್ಲ ಯಾಂತ್ರಿಕವಾದಾಗ 'ನಾನು'ವಿನ ಪ್ರಸಕ್ತಿ ಇರುವುದಿಲ್ಲ. ಇಂತಹ ವೇಳೆಯಲ್ಲಿ ಮನಸ್ಸು ಹಿಡಿತದಲ್ಲಿರದೆ ನಾವು ಎಚ್ಚರ ತಪ್ಪುವ ಸಾಧ್ಯತೆ ಇರುತ್ತದೆ. ಆದ್ದರಿಂದ ಕೆಲಸದಲ್ಲಿ ವ್ಯಕ್ತಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು.

ಕೆಲಸಗಾರನಿಗೆ ಮಾಡುತ್ತಿರುವ ಕೆಲಸದಲ್ಲಿ ಒಲವು, ಶ್ರದ್ಧೆಯಿದ್ದರೆ ಮಾತ್ರ ಆ ಕೆಲಸದಲ್ಲಿ ತಲ್ಲೀನತೆ ಬರಲು ಸಾಧ್ಯ. ಒಬ್ಬ ಕಲೆಗಾರ ಚಿತ್ರವನ್ನು ಬಿಡಿಸುತ್ತಿರುವಾಗ, ಶಿಲ್ಪವನ್ನು ಕೆತ್ತುತ್ತಿರುವಾಗ ಈ ತಲ್ಲೀನತೆಯನ್ನು ಕಾಣುತ್ತೇವೆ. ಮನೆಯ ಗೋಡೆಗಳಿಗೆ ಬಣ್ಣ ಬಳಿಯುವ ಕಸುಬಿನವನಿಗೆ ಇಂತಹ ತಲ್ಲೀನತೆ ಸಾಧ್ಯವಾದಾಗ ಅಲ್ಲಿ ಉತ್ತಮವಾದ ಕಲೆ ಉಂಟಾಗುತ್ತದೆ. ಸಾಧಾರಣವಾದ ಕೆಲಸಕ್ಕೂ, ಕಲೆಗೂ ಇರುವ ವ್ಯತ್ಯಾಸ ಈ ತಲ್ಲೀನತೆಯಲ್ಲೇ ಇರುವುದು. ಮನೆಯಲ್ಲಿ ಬೇಸತ್ತು ಅಡುಗೆ ಮಾಡುವ ಗೃಹಿಣಿಗೂ, ಹೋಟೆಲಿನಲ್ಲಿ ರುಚಿಯೊಂದಿಗೆ ನೋಡಲು ಅಂದವಾಗಿರುವಂತೆ ಪದಾರ್ಥವನ್ನು ಜೋಡಿಸುವ— ಅದನ್ನು ಒಂದು ಕಲೆಯಾಗಿ ಮಾರ್ಪಾಡು ಮಾಡುವ — ಬಾಣಸಿಗನಿಗೂ ಇದೇ ವ್ಯತ್ಯಾಸ. ಈ ತಲ್ಲೀನತೆ ಕೆಲಸದಲ್ಲಿನ 'ಬೇಜಾರು', 'ಬೇಸರ'ಗಳನ್ನು ತೆಗೆದುಹಾಕಿ ಸೃಜನಶೀಲತೆ, ನವೀನತೆಯನ್ನು ತುಂಬಬಲ್ಲದು.

ಅರ್ಚಕರಾಗಿ ನೇಮಕಗೊಂಡ ಶ್ರೀರಾಮಕೃಷ್ಣರು ಈ ತಲ್ಲೀನತೆಯನ್ನು ಆಶ್ರಯಿಸಿ ಸಾಧಕರಾದರು. ಪೂಜೆಯೇ ಧ್ಯಾನ, ಯೋಗಗಳಲ್ಲಿ ಪರಿಣಮಿಸಿತು. ಕರ್ಮಯೋಗದ ರಹಸ್ಯವಾಗಿರುವ 'ಅನಾಸಕ್ತಿ'ಯನ್ನು ಅಪಾರ್ಥ ಮಾಡಿಕೊಂಡು ನಮ್ಮ ಭಾರತೀಯ ಜನತೆ ಕೆಲಸದಲ್ಲಿ ಆಸಕ್ತಿಯನ್ನೇ ತೋರುವುದಿಲ್ಲ. ಇದರ ಪರಿಣಾಮವಾಗಿ ಎಲ್ಲೆಡೆ ಕಳಪೆ ಕಾಮಗಾರಿಯನ್ನು ಕಾಣುತ್ತೇವೆ. 'ಮರೆವು' ಕೂಡ ಈ ತಲ್ಲೀನತೆಯ ಅಭಾವದಿಂದಲೇ ಪರಿಣಮಿಸುವುದು. ಶ್ರೀರಾಮಕೃಷ್ಣರು ಒಮ್ಮೆ ಕೊಲ್ಕತಾದ ಕಡೆ ಹೊರಟಾಗ ಅವರ ಶಿಷ್ಯ ಮೈ ಒರಸುವ ಚೌಕವನ್ನು ಮರೆತಿರುವುದನ್ನು ಕಂಡು ಹೇಳುತ್ತಾರೆ : "ನಾನು ಬಾಹ್ಯಪ್ರಜ್ಞೆಯನ್ನು ಕಳೆದುಕೊಂಡು ಸಮಾಧಿಯಲ್ಲಿ ಇರುತ್ತಿದ್ದರೂ ಮರೆವು ನನ್ನಲ್ಲಿಲ್ಲ. ಮರೆಯುವುದು ತಮಸ್ಸಿನ ಲಕ್ಷಣ." ಮತ್ತೊಂದು ದಿನ ಅವರ ಶಿಷ್ಯ ಯೋಗೇನ್ (ಸ್ವಾಮಿ ಯೋಗಾನಂದ) ನಿಗದಿತ ಸ್ಥಳದಲ್ಲಿ ಚಾಕುವನ್ನು ಇಟ್ಟಿರಲಿಲ್ಲ. ಶ್ರೀರಾಮಕೃಷ್ಣರು ಇದನ್ನು ಕಂಡು ಹೇಳುತ್ತಾರೆ : "ಪ್ರತಿಯೊಂದು ವಸ್ತುವನ್ನೂ ಉಪಯೋಗಿಸಿದ ನಂತರ ತೆಗೆದುಕೊಂಡ ಸ್ಥಳದಲ್ಲೇ ಇಡಬೇಕು. ಇಲ್ಲದಿದ್ದರೆ ಮತ್ತೆ ಬೇಕಾದಾಗ ಸಮಯ ವ್ಯರ್ಥವಾಗಿ ಆತಂಕ ಉಂಟಾಗುತ್ತದೆ." ಯೋಗವೆಂದರೆ ಮನಸ್ಸನ್ನು ನಿಗ್ರಹಿಸಿ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವುದಾದ್ದರಿಂದ ಪ್ರತಿಯೊಂದು ಕ್ರಿಯೆಯಲ್ಲೂ ಯೋಗಿಯು ಉತ್ತಮಿಕೆಯನ್ನೇ ಸಾಧಿಸುತ್ತಾನೆ. ಈ ಅಂಶವನ್ನು ಮರೆತು ನಾವು ಕೇವಲ ಧ್ಯಾನದ ವೇಳೆಯಲ್ಲಿ ಯೋಗ, ಉಳಿದ ಚಟುವಟಿಕೆಗಳಲ್ಲಿ ಓರಣವಿಲ್ಲದೆ ಇರುವುದು ಸರಿಯೆಂದು ಭಾವಿಸುವುದಷ್ಟೇ ಅಲ್ಲ, ಅದೇ ಆಧ್ಯಾತ್ಮಿಕತೆಯ ಲಕ್ಷಣ, ಅನಾಸಕ್ತಿಯ ಪರಮಾವಧಿ ಎಂಬ ಭ್ರಮೆಯನ್ನೂ ರೂಢಿಸಿಕೊಳ್ಳುತ್ತೇವೆ.

### ಕೆಲಸಕ್ಕೆ ಮೂಲ—ಪ್ರೇರಣೆ

ಒಬ್ಬ ವ್ಯಕ್ತಿ ಕೆಲಸವನ್ನು ಮಾಡುವಾಗ ಫಲಾಪೇಕ್ಷೆಯ ಪ್ರೇರಣೆಯಿಂದಲೇ ಆ ಕೆಲಸವನ್ನು ಕೈಗೊಳ್ಳುವುದು. ನಿರರ್ಥಕವಾಗಿ ಯಾರೂ ಕೆಲಸವನ್ನು ಮಾಡಬಯಸುವುದಿಲ್ಲ. ಭೋಕ್ತೃತ್ವ ಎಂದರೆ

ಅನಾಸಕ್ತಿ ಎಂದರೆ ನಮ್ಮ ದೇಹದ ಹೊರಗಡೆ ನಾವು ಏನನ್ನೋ ಬಳಿದುಕೊಳ್ಳಬೇಕೆಂದು ಅಲ್ಲ. ಅದೆಲ್ಲ ಮನಸ್ಸಿನಲ್ಲಿದೆ. ನಮಗೆ ದೇಹ ಮತ್ತು ಇಂದ್ರಿಯಗಳಲ್ಲಿ ಆಸಕ್ತಿ ಇಲ್ಲದೆ ಇದ್ದರೆ ನಾವು ಎಲ್ಲಿದ್ದರೂ ಚಿಂತೆಯಿಲ್ಲ, ಏನು ಮಾಡಿದರೂ ಚಿಂತೆಯಿಲ್ಲ. ಒಬ್ಬ ಸಿಂಹಾಸನದ ಮೇಲಿದ್ದರೂ ಅನಾಸಕ್ತನಾಗಿರಬಲ್ಲ. ಮತ್ತೊಬ್ಬ ಹರಕಲು ಬಟ್ಟೆ ಹೊಂದಿದ್ದರೂ ಆಸಕ್ತನಾಗಿರಬಲ್ಲ. ಮೊದಲು ನಾವು ಅನಾಸಕ್ತಿಯನ್ನು ರೂಢಿಸಿಕೊಳ್ಳಬೇಕು. ಅನಂತರ ಅನವರತ ಕೆಲಸದಲ್ಲಿ ತಲ್ಲೀನರಾಗಿರಬೇಕು. ಆಸಕ್ತಿಯನ್ನು ಹೇಗೆ ಕಳೆದುಕೊಳ್ಳಬಹುದು ಎಂಬುದನ್ನು ಕರ್ಮಯೋಗ ಬೋಧಿಸುವುದು. ಆದರೆ ಇದು ಸುಲಭಸಾಧ್ಯವಲ್ಲ.

—ಸ್ವಾಮಿ ವಿವೇಕಾನಂದ (ಸ್ವಾಮಿ ವಿವೇಕಾನಂದರ ಬೋಧನೆಯ ಸಾರ, ಪುಟ, ೧೧೬.)

ಈ ಕೆಲಸದಿಂದ ನಾನು ಸುಖ ಅನುಭವಿಸುತ್ತೇನೆ, ಧನಿಕನಾಗುತ್ತೇನೆ, ಪ್ರಸಿದ್ಧನಾಗುತ್ತೇನೆ ಎಂಬ ಪ್ರೇರಕಶಕ್ತಿ ನಮ್ಮನ್ನು ನಿರಂತರವಾಗಿ ಕಾರ್ಯತತ್ಪರರನ್ನಾಗಿಸುತ್ತದೆ. ಆಲಸಿಯೂ ಕೂಡ ಸೋಮಾರಿತನದಲ್ಲಿ ಸುಖವಿದೆ ಎಂಬ ಭ್ರಮೆಯಿಂದ ಅದನ್ನು ಅವಲಂಬಿಸಿರುತ್ತಾನೆ. ತಾಯಿ ಮಗುವಿನ ಶುಶ್ರೂಷೆಗಾಗಿ ಮೈಮರೆತು ದುಡಿಯುವಾಗ ಅವಳಿಗೆ ದೊರೆಯುವ ಸಂತೃಪ್ತಿಯೇ ಪ್ರೇರಣೆ. ಒಬ್ಬ ವಿಜ್ಞಾನಿಯು ಅನ್ವೇಷಣೆಯಲ್ಲಿ ತೊಡಗಿದಾಗ ತಾನು ಹೊಸದನ್ನು ಆವಿಷ್ಕರಿಸುವೆ, ಹೆಚ್ಚು ಜ್ಞಾನವನ್ನು ಪಡೆಯುವೆ ಎಂಬ ಪ್ರೇರಣೆಯನ್ನು ಹೊಂದಿರುತ್ತಾನೆ. ಒಬ್ಬ ಕಳ್ಳನೂ ಕೂಡ ಕದ್ದ ವಸ್ತುವಿನಿಂದ ಆನಂದಿಸಬಹುದು ಎಂಬ ಪ್ರೇರಣೆಯಿಂದಲೇ ಕದಿಯುತ್ತಾನೆ. ಪ್ರೇರಣೆಯೇ ಜೀವನದ ಲಕ್ಷಣ. ಅದಿಲ್ಲದಿದ್ದರೆ ಜೀವನ ಅರ್ಥಹೀನವೆಂದು ಭಾಸವಾಗಿ ಮಾನಸಿಕ ದುಗುಡ, ಖಿನ್ನತೆಗಳಿಗೆ ಕಾರಣವಾಗುತ್ತದೆ.

ಇಲ್ಲಿ ಎರಡು ವಿಷಯಗಳನ್ನು ಪ್ರಮುಖವಾಗಿ ಗಮನಿಸಬೇಕು. ನಮ್ಮ ಕಾರ್ಯದ ಪ್ರೇರಕಶಕ್ತಿ ಮತ್ತೊಬ್ಬರ ಹಿತವನ್ನು ಕಡೆಗಣಿಸಬಾರದು. ಮನುಷ್ಯ ಸಮಾಜಜೀವಿಯಾದ್ದರಿಂದ ಕೇವಲ ವೈಯಕ್ತಿಕ ಪ್ರೇರಣೆಯಿಂದ ಮಾತ್ರ ಅವನ ಜೀವನ ನಿಯಂತ್ರಿತವಾಗಿಲ್ಲ. ಅಲ್ಲಿ ಮೌಲ್ಯಗಳಿಗೂ ಸ್ಥಾನವಿರಬೇಕು. ಪ್ರಾಣಿಗಳಲ್ಲೂ ಕೂಡ ಈ ನಿಯಮವನ್ನು ಕಾಣುತ್ತೇವೆ. ಜೊತೆಯಾಗಿ ಬಾಳುವ ಪ್ರಾಣಿಗಳ ಹಿಂಡಿನಲ್ಲಿ ಶಿಸ್ತು ಹಾಗೂ ವಿಧೇಯತೆಗೆ ಬಹಳ ಒತ್ತು ನೀಡಲಾಗುತ್ತದೆ. ಹಾಗೆ ಒಪ್ಪಿಕೊಳ್ಳದ ಪ್ರಾಣಿಯನ್ನು ಗುಂಪಿನಿಂದ ಹೊರಗೆ ಓಡಿಸಿಯೋ ಅಥವಾ ಬಲಪ್ರಯೋಗದಿಂದ ಅಧೀನವಾಗಿಸುವುದರ ಮೂಲಕವೋ ಶಿಸ್ತಿಗೆ ಒಳಪಡಿಸಲಾಗುತ್ತದೆ. ಈ ನಡವಳಿಕೆಯನ್ನು ನಾಯಿ, ಕೋತಿ ಮುಂತಾದ ಅನೇಕ ಪ್ರಾಣಿವರ್ಗಗಳಲ್ಲಿ ಹಾಗೂ ಹಕ್ಕಿಗಳಲ್ಲಿ ಕಾಣಬಹುದು. ಎಲ್ಲರ ಬಾಳುವೆಯಲ್ಲಿ ನಮ್ಮ ಬಾಳುವೆ, ಎಲ್ಲರ ಸುಖವೇ ನಮ್ಮ ಸುಖವೆಂಬ ಭಾವನೆ ಮನುಷ್ಯನ ಸಾಮಾಜಿಕ ಪ್ರವೃತ್ತಿಯಿಂದ ಮೂಡಿದೆ. ಒಬ್ಬ ಕಳ್ಳ ಬೇರೆಯವರ ವಸ್ತುಗಳನ್ನು ಕದಿಯುತ್ತಿದ್ದರೂ ತನ್ನ ವಸ್ತುಗಳನ್ನು ಮತ್ತೊಬ್ಬರು ಕದಿಯಲಿ ಎಂದು ಆಶಿಸಲಾರ. ಆದ್ದರಿಂದ ಸಾಮಾಜಿಕ ರಚನೆಯಲ್ಲಿ ಪರಸ್ಪರ ಸಂಬಂಧ, ಗೌರವ ಹಾಗೂ ಹಕ್ಕುಗಳಿಗೆ ಮಾನ್ಯತೆ ಇದೆ. ಅದನ್ನು ಉಲ್ಲಂಘಿಸಿದ ವ್ಯಕ್ತಿಗೆ ಶಿಕ್ಷೆ ಅನಿವಾರ್ಯವೂ ಕೂಡ.

ಮತ್ತೊಬ್ಬರ ಸ್ವಾತಂತ್ರ್ಯವನ್ನು ಅತಿಕ್ರಮಿಸುವುದೂ ಕೂಡ ಕೆಲವರಿಗೆ ಪ್ರೇರಣೆಯಾಗಬಹುದು. ಯುದ್ಧಗಳಲ್ಲಿ ಧನಸಂಗ್ರಹ, ಸಾಮ್ರಾಜ್ಯಶಾಹಿ ಮನೋಭಾವಗಳೊಂದಿಗೆ ಸೆರೆಯಾಳುಗಳ ಮೇಲೆ ಆಗುವ ಅಮಾನವೀಯ ದೌರ್ಜನ್ಯ, ಹಿಂಸೆಗಳು ಜನತೆಯ ಮನದಲ್ಲಿ ವಿಷಾದವನ್ನು ಮೂಡಿಸುತ್ತವೆ. ಉಗ್ರವಾದಿಗಳು ತಮ್ಮ ಅಭಿಪ್ರಾಯವನ್ನು ಒಪ್ಪದವರ ಮೇಲೆ ಆಕ್ರಮಣ ಮಾಡಿ ಸಾವು, ನೋವುಗಳಿಗೆ ಕಾರಣರಾಗುತ್ತಾರೆ. ಧರ್ಮದ ಹೆಸರಿನಲ್ಲಿ ಇತರರ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುತ್ತಾರೆ. ಅದಕ್ಕೆ ತಮ್ಮ ಧರ್ಮವೇ ಪ್ರೇರಕಶಕ್ತಿ ಎಂದು ನಂಬಿರುತ್ತಾರೆ. ಹೀಗೆ ಪ್ರೇರಣೆ ನಿಷೇಧಾತ್ಮಕವಾಗಿ ಪರಿವರ್ತನೆಗೊಂಡು ಸಮಾಜದ ಒಳಿತಿಗೆ ಧಕ್ಕೆ ತರುವಂತಾಗುತ್ತದೆ. ನಮ್ಮ ಕ್ರಿಯೆಗಳ ಪ್ರೇರಕಶಕ್ತಿ ವೈಯಕ್ತಿಕ ಏಳ್ಗೆ, ಸಮಾಜದ ಏಳ್ಗೆ ಹಾಗೂ ವ್ಯಕ್ತಿಯ ಮಾನಸಿಕ-ಆಧ್ಯಾತ್ಮಿಕ ಪ್ರಗತಿಗೆ ಕಾರಣವಾಗಬೇಕು. ಆಗ ಮಾತ್ರ ನಾವು ಮಾಡುವ ಕೆಲಸ ನಮಗೆ ಸಂತೃಪ್ತಿಯನ್ನು ನೀಡಬಲ್ಲದು. ಮನುಸ್ಮೃತಿಯಲ್ಲಿ (೪:೧೬೧) ಹೀಗೆ ಹೇಳಿದೆ.

**ಯತ್ಕರ್ಮ ಕುರ್ವತೋಽಸ್ಯ ಸ್ಯಾತ್**
**ಪರಿತೋಷೋಽಂತರಾತ್ಮನಃ ।**
**ತತ್ಪ್ರಯತ್ನೇನ ಕುರ್ವೀತ ವಿಪರೀತಂ ತು ವರ್ಜಯೇತ್ ॥**

("ಯಾವ ಕೆಲಸವನ್ನು ಮಾಡುವುದರಿಂದ ನಮ್ಮ ಅಂತರಾತ್ಮನಿಗೆ ಸಂತೋಷವುಂಟಾಗುವುದೋ ಅಂತಹ ಕರ್ಮವನ್ನು ಕಷ್ಟಪಟ್ಟಾದರೂ ಮಾಡಬೇಕು. ನಮಗೆ ಆನಂದವನ್ನು ನೀಡದ ಕಾರ್ಯಗಳನ್ನು ಬಿಡಬೇಕು.")

ಪ್ರೇರಣೆಯನ್ನು ಕುರಿತು ಗಮನಿಸಬೇಕಾದ ಎರಡನೆಯ ವಿಷಯವೆಂದರೆ ತೀವ್ರವಾದ ಬಯಕೆ ಅಥವಾ ಪ್ರೇರಣೆ ವ್ಯಕ್ತಿಯ ಆತಂಕಕ್ಕೆ ಕಾರಣವಾದಾಗ ಅದು ಕಾರ್ಯಸಾಧನೆಯಲ್ಲಿ ವಿಘ್ನವಾಗಿ ಪರಿಣಮಿಸಬಹುದು. ಉದಾಹರಣೆಗೆ ಆಟವಾಡುತ್ತಿರುವ ಕ್ರೀಡಾಪಟು ತಾನು ಶತಕವನ್ನು ಬಾರಿಸಬೇಕು ಎಂದು ಸದಾ ಆಲೋಚಿಸುತ್ತಿದ್ದರೆ ಅದು ಅವನಲ್ಲಿ ಆತಂಕವನ್ನು ಉಂಟುಮಾಡಿ ಅವನು ಗುರಿತಪ್ಪುತ್ತಾನೆ. ಲಕ್ಷ್ಯವನ್ನು ನಿರ್ಧರಿಸಿ ಪ್ರತಿಯೊಂದು ಚೆಂಡನ್ನೂ ಅರಿವಿನಿಂದ ಎಚ್ಚೆತ್ತ ಮನಸ್ಸಿನಿಂದ ಆಟವಾಡಿದರೆ ಅವನು ಶತಕವನ್ನು ಬಾರಿಸುವ ಸಾಧ್ಯತೆ ಹೆಚ್ಚು. ಇಲ್ಲಿ ಒತ್ತಡವಿರುವುದಿಲ್ಲ, ಗುರಿಯೇ ಭಾರವಾಗಿ ಪ್ರಗತಿಗೆ ಅಡ್ಡಿಯಾಗುವುದಿಲ್ಲ. ತಾಳ್ಮೆ, ಸಹನೆಗಳು ಕಾರ್ಯಸಾಧನೆಯಲ್ಲಿ ಅಗತ್ಯವೆಂಬುದು ಇದರಿಂದ ತಿಳಿದುಬರುತ್ತದೆ.

ಯಾವ ಕೆಲಸವನ್ನು ಮಾಡಬೇಕು ಮತ್ತು ಯಾವುದನ್ನು ಮಾಡಬಾರದು ಎಂದು ನಿರ್ಣಯಿಸುವುದು ಕಷ್ಟ. ಶಾಸ್ತ್ರಗಳು ಎಲ್ಲ ಕ್ರಿಯೆಗಳನ್ನು ಸ್ಥೂಲವಾಗಿ ವಿಹಿತ ಕರ್ಮ ಮತ್ತು ನಿಷಿದ್ಧ ಕರ್ಮ ಅಂದರೆ ಮಾಡಲೇಬೇಕಾದ ಕ್ರಿಯೆಗಳು ಹಾಗೂ ಮಾಡಬಾರದ ಕ್ರಿಯೆಗಳು ಎಂದು ವಿಂಗಡಿಸುತ್ತವೆ. ವಿಹಿತ ಕರ್ಮದಲ್ಲಿ ಪುನಃ ಮೂರು ವಿಧ: ನಿತ್ಯಕರ್ಮ, ನೈಮಿತ್ತಿಕ ಕರ್ಮ ಮತ್ತು ಕಾಮ್ಯ ಕರ್ಮ.

ಪ್ರತಿನಿತ್ಯ ನಾವು ಮಾಡುವಂತಹ ಕ್ರಿಯೆಗಳು ನಿತ್ಯಕರ್ಮಗಳು. ಪೂಜೆ, ಅರ್ಚನೆ, ಸಂಧ್ಯಾವಂದನೆ, ದಾನಾದಿಗಳು ಇದರಲ್ಲಿ ಸೇರಿಕೊಳ್ಳುತ್ತವೆ. ಫಲಾಪೇಕ್ಷೆಯಿಂದ ಅಥವಾ ಆಸೆಯ ಪೂರೈಕೆಗಾಗಿ ಮಾಡುವ ಕ್ರಿಯೆಗಳು ಕಾಮ್ಯಕರ್ಮಗಳು. ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕು, ಒಳ್ಳೆಯ ವರ ಸಿಗಲಿ, ವಧು ಸಿಗಲಿ, ಕೆಲಸದಲ್ಲಿ ಬಡ್ತಿ ಸಿಗಲಿ, ಸಂಕಷ್ಟ ಪರಿಹಾರವಾಗಲಿ ಎಂದು ಪೂಜೆ ಮಾಡಿಸುವುದು, ವಿಶೇಷ ವ್ರತಗಳನ್ನು ಆಚರಿಸುವುದು ಇದಕ್ಕೆ ನಿದರ್ಶನಗಳು. ಶ್ರಾದ್ಧ, ಮದುವೆ ಮುಂತಾದ ಎಂದಾದರೊಮ್ಮೆ ಮಾಡುವಂತಹ ಕರ್ಮಗಳು, ಅಥವಾ ಹಬ್ಬಹರಿದಿನಗಳಂದು ಉಪವಾಸ ಮಾಡಿ ವ್ರತಪೂಜೆಗಳನ್ನು ಮಾಡುವುದು ಇವೆಲ್ಲ ನೈಮಿತ್ತಿಕ ಕರ್ಮಗಳು—ಯಾವುದಾದರೊಂದು ಕಾರಣದಿಂದ ಒದಗಿ ಬರುವ ಕರ್ಮಗಳು. ಮನುಷ್ಯನ ಎಲ್ಲ ಕ್ರಿಯೆಗಳನ್ನೂ ಈ ಗುಂಪುಗಳಡಿಯಲ್ಲಿ ಸೇರಿಸಬಹುದಾಗಿದೆ. ಇದರಲ್ಲಿ ಪುನಃ ಧಾರ್ಮಿಕ ಮತ್ತು ಅಧಾರ್ಮಿಕ ಕ್ರಿಯೆಗಳು ಎಂದು ವಿಂಗಡಿಸಬಹುದು. ಯಾವುದು ಶ್ರೇಯಸ್ಸು, ಪ್ರೇಯಸ್ಸುಗಳಿಗೆ ಮಾರ್ಗವಾಗುವುದೋ ಅದು ಧಾರ್ಮಿಕ ಕ್ರಿಯೆ. ಹಿಂಸೆ, ದುಃಖ, ಹಾನಿಯನ್ನೇ ಪರಿಣಾಮವಾಗಿ ಹೊಂದಿರುವ ಕ್ರಿಯೆಗಳು ಅಧಾರ್ಮಿಕ. ಇಷ್ಟೊಂದು ಬಗೆಯ ಕರ್ಮಗಳಿರುವುದರಿಂದಲೇ ಗೊಂದಲ ಉಂಟಾಗಬಹುದೆಂದು ಶ್ರೀಕೃಷ್ಣ ಅರ್ಜುನನಿಗೆ ಹೇಳುತ್ತಾನೆ: 'ಯಾವುದು ಕರ್ಮ, ಯಾವುದು ಅಕರ್ಮ ಎಂಬ ವಿಷಯದಲ್ಲಿ ತಿಳಿದವರೂ ಕೂಡ ಭ್ರಾಂತರಾಗಿರುವರು. ಯಾವ ಕರ್ಮದಿಂದ ನೀನು ಮುಕ್ತನಾಗುವೆಯೋ ಅಂತಹ ಕರ್ಮ(ರಹಸ್ಯ)ವನ್ನು ನಿನಗೆ ತಿಳಿಸಿಕೊಡುವೆ.'

ಕೆಲಸ ಮಾಡುವಾಗ ಇಷ್ಟೆಲ್ಲ ಆಲೋಚನೆ ಮಾಡಿ ಕೆಲಸ ಮಾಡಲು ಸಮಯವೆಲ್ಲಿ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಉತ್ತರವೂ ಸುಲಭ. ನಾವು ಕೆಲಸ ಮಾಡುವುದು ಸುಖಕ್ಕಾಗಿ, ಆನಂದಕ್ಕಾಗಿ. ಅದೇ ದೊರೆಯದಿದ್ದ ಮೇಲೆ ಕೆಲಸ ಮಾಡಿಯಾದರೂ ಪ್ರಯೋಜನವೇನು? ನಮ್ಮ ದಿನಚರಿಯಲ್ಲಿ ಆತ್ಮವಿಶ್ಲೇಷಣೆಗೆ ಸಮಯ ನೀಡದೆ ಯಾಂತ್ರಿಕವಾಗಿ ಬದುಕನ್ನು ನಡೆಸಿಕೊಂಡು ಹೋದರೆ ಯಂತ್ರಗಳಂತೆ ನಾವೂ ಒಂದು ದಿನ ಭಗ್ನಗೊಳ್ಳುವುದು ನಿಶ್ಚಿತ.

ನಮ್ಮ ದೇಶದಲ್ಲಿ ಇಷ್ಟೊಂದು ಸಾಮರ್ಥ್ಯವಿದ್ದರೂ ಪ್ರಗತಿ ಹೊಂದುತ್ತಿಲ್ಲವಲ್ಲ ಎಂದು ಕೊರಗಿ ಮಾತನಾಡುವವರು ಎಲ್ಲ ಅನಿಷ್ಟಕ್ಕೂ ನಮ್ಮ ಧಾರ್ಮಿಕ ನಂಬಿಕೆಗಳೆ ಕಾರಣ ಎಂದು ನಿಂದಿಸುತ್ತ "ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು" ಎಂಬ ಗಾದೆಯಂತೆ ಕುಹಕದ ಮಾತುಗಳನ್ನಾಡುವರು! ನಮ್ಮ ಸಾಮರ್ಥ್ಯವನ್ನು ಸರಿಯಾಗಿ ಬಳಸಿಕೊಂಡು ಧರ್ಮದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಕೆಲಸ ಮೊದಲು ಆಗಬೇಕು. ಪ್ರತಿಯೊಂದು ಕೆಲಸವನ್ನೂ ಶ್ರದ್ಧೆಯಿಂದ ಉನ್ನತವಾದ ಆದರ್ಶದೊಂದಿಗೆ ಮಾಡಿದ್ದೇ ಆದಲ್ಲಿ ನಮ್ಮ ದೇಶದ ಪರಿಸ್ಥಿತಿ ಸುಧಾರಿಸುವಲ್ಲಿ ಸಂದೇಹವಿಲ್ಲ. ಸೋಮಾರಿತನ ಹಾಗೂ ಸಮಸ್ಯೆಗಳನ್ನು ಎದುರಿಸಲು ಹಿಂಜರಿಕೆ, ಭಯ—ಇವೇ ನಮ್ಮ ನಾಡಿನ ಪಿಡುಗು. ಸರ್ಕಾರ ಸಾವಿರಾರು ಯೋಜನೆಗಳ ಮೂಲಕ ಪ್ರೋತ್ಸಾಹ ನೀಡುತ್ತಿದ್ದರೂ ನಮ್ಮ ಜನ ಉತ್ಸಾಹದಿಂದ ಮುನ್ನುಗ್ಗದೆ ಸೌಲಭ್ಯಗಳ ಉಪಯೋಗ ಪಡೆದುಕೊಳ್ಳದೆ ಇರುವುದನ್ನು ಕಾಣುತ್ತೇವೆ. ಇದು ನಮ್ಮ ಸಮಸ್ಯೆಗಳನ್ನು ಮತ್ತಷ್ಟು ಗಾಢವಾಗಿಸುತ್ತ ಹೊಸ ಪೀಳಿಗೆಯಲ್ಲಿ ನಿರುತ್ಸಾಹವನ್ನೇ ತರುತ್ತಿದೆ. ಪರಿಣಾಮವಾಗಿ, ಮೌಲ್ಯಗಳ ಕುಸಿತಕ್ಕೆ ಕಾರಣವಾಗುತ್ತಿದೆ. ಸಾಮಾಜಿಕ ಸಮಸ್ಯೆಗಳನ್ನು ಎದುರಿಸಲು ಎಲ್ಲರೂ ಪ್ರಯತ್ನಿಸಬೇಕು. ಇದೇ ನಮ್ಮ ಮುಂದಿರುವ ಆದ್ಯ ಕರ್ತವ್ಯವೆಂದು ತಿಳಿದು ವೈಯಕ್ತಿಕ ಸುಖವನ್ನು ಸಮಾಜದ ಹಿತದಲ್ಲಿ ಕಂಡುಕೊಳ್ಳೋಣ.

ನಮಗೆ ಅತ್ಯಂತ ಸಮೀಪದಲ್ಲಿರುವ ಕರ್ತವ್ಯವನ್ನು, ಎಂದರೆ, ಈಗ ನಮ್ಮ ಕೈಯಲ್ಲಿರುವ ಕರ್ತವ್ಯವನ್ನು ಚೆನ್ನಾಗಿ ಮಾಡುವುದರಿಂದ ನಮ್ಮ ಶಕ್ತಿ ಹೆಚ್ಚುತ್ತದೆ. ಈ ತೆರನಾಗಿ ನಮ್ಮ ಶಕ್ತಿಯನ್ನು ಮೆಲ್ಲಮೆಲ್ಲನೆ, ಹೆಜ್ಜೆಹೆಜ್ಜೆಗೆ, ಹೆಚ್ಚಿಸಿಕೊಳ್ಳುತ್ತ ಹೋದರೆ, ಕೊನೆಗೆ ಈ ಜೀವನದಲ್ಲಿಯೂ, ಸಮಾಜದಲ್ಲಿಯೂ ಅತ್ಯಂತ ಪ್ರೀತಿಯನ್ನು ಹುಟ್ಟಿಸುವಂತಹ, ಅತ್ಯಂತ ಗೌರವದಿಂದ ಕೂಡಿದ ಕರ್ತವ್ಯಗಳನ್ನು ನೆರವೇರಿಸುವ ಅಧಿಕಾರವನ್ನು ಹೊಂದುತ್ತೇವೆ. ಪೈಪೋಟಿಯು ಹೊಟ್ಟೆಕಿಚ್ಚನ್ನು ಎಬ್ಬಿಸಿ ಮನುಷ್ಯನ ಹೃದಯದಲ್ಲಿರುವ ದಯೆಯನ್ನು ಧ್ವಂಸಮಾಡುತ್ತದೆಂಬುದನ್ನು ನಾವು ಗ್ರಹಿಸುವುದು ಒಳ್ಳೆಯದು. ಆದರೆ ಗೊಣಗುಟ್ಟುವ ವ್ಯಕ್ತಿಗಾದರೋ ಎಲ್ಲ ಕರ್ತವ್ಯಗಳೂ ಬೇಸರವನ್ನು ಉಂಟುಮಾಡತಕ್ಕವೇ. ಯಾವುದೂ ಆತನನ್ನು ತೃಪ್ತಿಗೊಳಿಸದು. ಆತನ ಆಯುಷ್ಯವೆಲ್ಲ ವ್ಯರ್ಥವಾಗುತ್ತದೆ. ಆದುದರಿಂದ ನಾವು ಕರ್ಮ ಮಾಡುತ್ತ ಮುಂದುವರಿಯೋಣ. ನಮಗೆ ಲಭಿಸುವ ಕರ್ತವ್ಯವನ್ನು ನಮ್ಮ ಸಂಪೂರ್ಣ ಮನಸ್ಸಿನಿಂದ ಮಾಡಲು ಸರ್ವದಾ ಸಿದ್ಧರಾಗಿರೋಣ. ಏಕೆಂದರೆ, ಆಗ ಯಥಾರ್ಥವಾಗಿಯೂ ನಮಗೆ ಜ್ಞಾನ ಜ್ಯೋತಿಯ ದರ್ಶನವಾಗುವುದು.

—ಸ್ವಾಮಿ ವಿವೇಕಾನಂದ. (ಕೃತಿಶ್ರೇಣಿ, ೧ : ೭೪)